## <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## ಸಿ.ಸಿ. ಸಂಖ್ಯೆಃ 3338/2022

**ಸಾಕ್ಷಿಯನ್ನು ದಿಃ 22.12.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ರವಿ | ಸಿಡಬ್ಲ್ಯೂಃ 2 | ಪಿಡಬ್ಲ್ಯೂಃ 5 |
| ತಂದೆಯ ಹೆಸರು | ರಾಮಣ್ಣ | | |
| ವಯಸ್ಸು | 54 ವರ್ಷ | | |
| ಕೆಲಸ | ಅಂಚೆ ಸಹಾಯಕ | | |
| ವಾಸಸ್ಥಳ | ಹುಣಸೂರು | | |

### <u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ಈ ಪ್ರಕರಣದ ಆರೋಪಿ ಗೊತ್ತು. ಆರೋಪಿ ಮತ್ತು ಆರೋಪಿಯ ಮನೆ ನಮ್ಮ ಮನೆಯ ಎದುರುಗಡೆ ಇದೆ. ಚಾಸಾ–1 ನನ್ನ ಅಣ್ಣ, ಚಾಸಾ–3 ಗೊತ್ತು. ಅವರು ನಮ್ಮ ಪಕ್ಕದ ಮನೆಯವರು. ದಿನಾಂಕಃ 24.01.2017ರಂದು ರಾತ್ರಿ 10.30ರ ಸಮಯದಲ್ಲಿ ನೀರು ಬಂದಿದ್ದು, ನಾನು ಮತ್ತು ಚಾಸಾ–1 ರವರು ನೀರನ್ನು ತುಂಬುತ್ತಿದ್ದಾಗ, ಆ ಸಮಯದಲ್ಲಿ ಎದುರುಮನೆಯಲ್ಲಿದ್ದ 1ನೇ ಆರೋಪಿ ನಮಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು, ಚಾಸಾ–1 ರವ ರು 1ನೇ ಆರೋಪಿಯನ್ನು ಪ್ರಶ್ನಿಸಿದಾಗ ನಮ್ಮ ಮನೆಗೆ ನೀರನ್ನು ಬಿಡಬೇಡಿ ಎಂದು ಜಗಳ ತೆಗೆದರು. ನಾವು ಏನು ಹೇಳಿರುವುದಿಲ್ಲ, ನೀವೇ ಕೇಳಿಕೊಳ್ಳಿ ಎಂದು ಹೇಳಿದೆವು. 1ನೇ ಆರೋಪಿ ಮೇನ್ ಲೈನ್ ಕನೆಕ್ಷನ್ ಅನ್ನು ಕಟ್ ಮಾಡಿ ಎಂದು ಪುರಸಭೆಗೆ ಹೇಳಿದ್ದಿರಾ, ಅಣ್ಣ–ತಮ್ಮಂದಿರು ಇಬ್ಬರನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದರು. ಈಗಾಗಲೇ ನಾನು ಕೊಲೆ ಮಾಡಿ ಜೈಲಿಗೆ ಹೋಗಿ ಬಂದಿದ್ದೇನೆ ಎಂದು ತೊಡೆ ತಟ್ಟಿದರು. ಮನೆಯಿಂದ ಮಚ್ಚನ್ನು ತೆಗೆದುಕೊಂಡು ಬರುವಂತೆ 2ನೇ ಆರೋಪಿಗೆ ತಿಳಿಸಿದರು. ಈಗಾಗಲೇ ಒಂದು ಕೊಲೆಯನ್ನು ಮಾಡಿದ್ದಿರಾ ಧೈರ್ಯವಾಗಿ ಇವರನ್ನು ಕೊಲೆ ಮಾಡಿ ಎಂದು ಮಚ್ಚನ್ನು ಕೊಟ್ಟು ಕುಮ್ಮಕ್ಕು ನೀಡಿದರು. ಈ ಪ್ರಕರಣದ ಆರೋಪಿ ಬಂದು ಇವರದ್ದು ಒಂದೇ ಕುಟುಂಬ ಇರುತ್ತದೆ, ಇವರನ್ನು ತೆಗೆದು ಹಾಕು ಎಂದು ಕುಮ್ಮಕ್ಕು ನೀಡಿದ್ದಾರೆ. ಆ ಸಮಯದಲ್ಲಿ ಚಾಸಾ–3 ರವರು ಬಂದು ಜಗಳ ಬಿಡಿಸಿದರು. ಆದರೂ ಸಹ

1ನೇ ಆರೋಪಿ ನಮ್ಮ ಮನೆಯ ಬಳಿ ಬಂದು ನಮ್ಮನ್ನು ಹಿಡಿದು ತಳ್ಳಿ ಮಚ್ಚನ್ನು ತೋರಿಸಿ ಕೊಲೆ ಬೆದರಿಕೆ ಹಾಕಿದರು. ನಂತರ ಚಾಸಾ-1 ರವರು ದಿಃ 28.01.2017ರಂದು ದೂರನ್ನು ನೀಡಿದರು. ಗಲಾಟೆಯಾದ ಮರುದಿನ ನಾನು ಪೋಲೀಸ್ ಠಾಣೆಗೆ ಹೋಗಿ ವಿಚಾರವನ್ನು ತಿಳಿಸಿದ್ದೇನೆ. ಪೋಲಿಸರು ಈಗ ಯಾವುದೇ ದೂರು ಬೇಡ ಎಂದು ಹೇಳಿದರು. ಆದರೆ ಆರೋಪಿತರು ಪುನಃ ಬೆದರಿಕೆ ಹಾಕುತ್ತಿದ್ದರಿಂದ ಚಾಸಾ-1 ರವರು ದೂರನ್ನು ನೀಡಿದ್ದಾರೆ. ನಾನು ಈ ವಿಚಾರವಾಗಿ ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ಸದರಿ ದಿನದಂದು 1ನೇ ಆರೋಪಿ ನನ್ನನ್ನು ಹಾಗೂ ಚಾಸಾ-1 ರವರನ್ನು ನೋಡಿಕೊಂಡು ನೀರಿನ ವಿಚಾರದಲ್ಲಿ ಯಾರಾದರು ಬಂದರೆ ಅವರ ಕೈಕಾಲುಗಳನ್ನು ಕತ್ತರಿಸಿ ಹಾಕುತ್ತೇನೆ ಎಂದು ಬೈದರು ಎಂದರೆ ಸರಿ. ನಾವು ಸುಮ್ಮನಿದ್ದರೂ ಸಹ ಪುನಃ ಬೈಯುತ್ತಿದ್ದಾಗ ಈ ಬಗ್ಗೆ ಕೇಳಲಾಗಿ 1ನೇ ಆರೋಪಿ ನಮ್ಮನ್ನು ಅಡ್ಡಗಟ್ಟಿ ಗಲಾಟೆ ಮಾಡಿದರು ಎಂದರೆ ಸರಿ. ಚಾಸಾ-3 ರವರು ಜಗಳ ಬಿಡಿಸಿದರೂ ಸಹ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. 2ನೇ ಆರೋಪಿ 1ನೇ ಆರೋಪಿ ಅವರನ್ನು ಕೊಲೆ ಮಾಡಿ ಎಂದು ಕುಮ್ಮಕ್ಕು ನೀಡುತ್ತಿದ್ದರು ಎಂದರೆ ಸರಿ. ಯಾವುದೇ ಮಚ್ಚನ್ನು ತಂದಿರಲಿಲ್ಲ ಎಂದರೆ ಮಚ್ಚನ್ನು ತಂದಿದ್ದರು. ದಿಃ 29.01.2017ರಂದು ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ . SNK ಪರ ಕು. ASM ವಕೀಲರಿಂದಃ**

ನಿಮ್ಮ ವಾಸ ಎಲ್ಲಿ ಎಂದರೆ ಈಗ ನಾನು ಮಂಜುನಾಥ ಬಡಾವಣೆಯಲ್ಲಿ ವಾಸವಾಗಿದ್ದೇನೆ. ನಾನು ನೆಲ ಅಂತಸ್ತಿನಲ್ಲಿ ಮತ್ತು ನನ್ನ ಅಣ್ಣ ಮೇಲಂತಸ್ತಿನಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ನಾನು ಅಂಚೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೆ ಮತ್ತು ನನ್ನನ್ನು dismiss ಮಾಡಿರುತ್ತಾರೆ ಎಂದರೆ ಸರಿ. ಈಗ ಕೆಲಸಕ್ಕೆ ಹೋಗುತ್ತಿದ್ದೇನೆ. ಯಾವ ಕಾರಣಕ್ಕಾಗಿ ನಿಮ್ಮನ್ನು ಕೆಲಸದಿಂದ ತೆಗೆಯಲಾಗಿತ್ತು ಎಂದರೆ ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟಿದ್ದೆ ಎಂದು ತೆಗೆದಿರುತ್ತಾರೆ. ನಾನು ವಾಸ ಮಾಡುತ್ತಿರುವ ಮನೆ ನನ್ನ ಅಣ್ಣನ ಹೆಸರಿನಲ್ಲಿದೆ. ನಿಮ್ಮ ಮನೆಗೆ ನೀರಿನ ಸಂಪರ್ಕ ಇದೆಯೇ ಎಂದರೆ ಇದೆ. ಮಂಜುನಾಥ

ಬಡಾವಣೆಯಲ್ಲಿ ಎಲ್ಲರಿಗೂ ಪ್ರತ್ಯೇಕವಾದ ನೀರಿನ ಸಂಪರ್ಕ ಇರುತ್ತದೆ ಎಂದರೆ ಸರಿ. 1ನೇ ಆರೋಪಿ ಅಕ್ರಮವಾಗಿ ಸಂಪರ್ಕ ಪಡೆದಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಅಕ್ರಮ ನೀರಿನ ಸಂಪರ್ಕ ಹೊಂದಿರುವ ಬಗ್ಗೆ ದೂರನ್ನು ನೀಡಿದ್ದಿರಾ ಎಂದರೆ ನಾನೇ ದೂರು ನೀಡಿದ್ದೇನೆ. ದಿಃ 25.01.2017ರಂದು ದೂರನ್ನು ನೀಡಿದ್ದೇನೆ. ಇದುವರೆಗೂ ಪುರಸಭೆಯವರು ಯಾವುದಾದರೂ ಕ್ರಮ ಕೈಗೊಂಡಿದ್ದಾರಾ ಎಂದರೆ ಕ್ರಮ ಕೈಗೊಂಡಿಲ್ಲ. ನೀರನ್ನು ಯಾವ ಸಮಯದಲ್ಲಿ ಬಿಡುತ್ತಿದ್ದರು ಎಂದರೆ ನಿಖರವಾದ ಸಮಯ ಇರುವುದಿಲ್ಲ. 2016ರಲ್ಲಿ ಬರಗಾಲ ಇದ್ದುದರಿಂದ 2017ರಲ್ಲಿ ನೀರನ್ನು ಸರಿಯಾಗಿ ಬಿಡುತ್ತಿರಲಿಲ್ಲ.

2ನೇ ಆರೋಪಿ ನನ್ನ ವಿರುದ್ಧ ದೂರು ನೀಡಿದ್ದಾರೆ ಎಂ ದರೆ ಸರಿ. ಸಣ್ಣ-ಪುಟ್ಟ ವಿಚಾರಗಳಿಗೆ ಈ ಪ್ರಕರಣದ ಆರೋಪಿಯೊಂದಿಗೆ ಗಲಾಟೆ ಮಾಡಿರುವುದರಿಂದ ಅವರು ನನ್ನ ವಿರುದ್ಧ ದೂರನ್ನು ದಾಖಲಿಸಿದ್ದಾರೆ ಎಂದರೆ ಸರಿ. ಆ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಈಗ ಮುಕ್ತಾಯವಾಗಿದೆ. 1 ಮತ್ತು 2ನೇ ಆರೋಪಿತರಿಗೆ ನಾನು ಅವಾಚ್ಯ ಶಬ್ದಗಳಿಂದ ಬೈದಿರುತ್ತೇನೆ ಮತ್ತು ನಮ್ಮ ಬಡಾವಣೆಯ ಹೆಣ್ಣು ಮಕ್ಕಳಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ದೂರನ್ನು ನೀಡಿರುವುದರಿಂದ ನಾನು ಮತ್ತು ನನ್ನ ಅಣ್ಣ ಷಡ್ಯಂತ್ರ ಹೂಡಿ ಅವರ ವಿರುದ್ಧ ಸುಳ್ಳು ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ನಾವು ದೂರು ನೀಡಿದ ನಂತರ ಅವರು ದೂರನ್ನು ನೀಡಿರುತ್ತಾರೆ. ಇಲ್ಲಿಯವರೆಗೆ ಪೋಲೀಸ್ ಠಾಣೆಗಾಗಲೀ, ಪುರಸಭೆಗಾಗಲಿ ನಾನು ದೂರನ್ನು ನೀಡಿಲ್ಲ. ಆರೋಪಿತರು ನೀಡಿರುವ ದೂರಿಗೆ ಪ್ರತಿ ದೂರು ದಾಖಲಿಸುವ ಉದ್ದೇಶದಿಂದ ನೀರಿನ ವಿಚಾರವಾಗಿ ಗಲಾಟೆಯಾಗಿದೆ ಎಂದು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.